Regd No B G 182

" ಗೋರಕ್ಷಣ " ಕ್ಕೆ ವಾರ್ಷಿಕಚಂದಾ
(ಅಂಚೇಮೂಲಕ) 60 ಪೈಸೆ

ಭಾರತದ ಆದ್ಯಂತ ಗೋವಧೆಯು
ಶಾಸನಬದ್ಧವಾಗಿ ನಿಷೇಧವಾಗಲಿ

Cow slaughter should be
banned immediately

20 ನೇ ವರ್ಷ

ಗೋ ಮಾತಾಕೀ ಜೈ

ಗೋರಕ್ಷಣ
GORAKSHANA

ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್

October 1969 ಅಕ್ಟೋಬರ್

Please help in every way
This Humanitarian
Propaganda Paper

★

ಗೋರಕ್ಷಣ, ಅಹಿಂಸಾ
ಪ್ರಚಾರ ಪತ್ರಿಕೆ

ವಿನಂತಿ— ಸಕಲ ರೀತಿಯಲ್ಲೂ ನೆರವುನೀ

ಬಿಡಿ ಪ್ರತಿ 2 ಪೈಸೆ

Cow Slaughter should be banned Immediately

ಅಖಿಲ ಭಾರತದಲಿ ಕೂಡಲೇ ಗೋವಧೆ ನಿಷೇಧವಾಗಲಿ

ಗೋದಾನ ಮಹಿಮೆ

ದಾನಗಳಲ್ಲಿ ಗೋದಾನವು ಮಹತ್ತರವಾದದ್ದು. ಮಾನವನು ತನ್ನ ಕೈಲಾಗುವ ಹಲವು ದಾನಗಳನ್ನು ಮಾಡುತ್ತಾನೆ: ಒಬ್ಬನು ಭೂಮಿಯನ್ನು ದಾನಾ ಮಾಡುತ್ತಾನೆ, ಮತ್ತೊಬ್ಬ ಹೆಣ್ಣನ್ನು ದಾನಾ ಮಾಡುತ್ತಾನೆ, ಮತ್ತೊಬ್ಬ ಧಾನ್ಯವನ್ನು ದಾನಾ ಮಾಡುತ್ತಾನೆ: ಈ ರೀತಿ ಒಬ್ಬೊಬ್ಬರು ಒಂದೊಂದು ರೀತಿ ದಾನಾ ಮಾಡುತ್ತಾರೆ. ಆದರೆ ಇವೆಲ್ಲಕ್ಕಿಂತಲೂ ಗೋದಾನವು ಶ್ರೇಷ್ಠೋತ್ತರವಾದದ್ದು. ಏಕೆಂದರೆ ಪಶುವಿನ ಶರೀರದಲ್ಲಿ ಎಲ್ಲಾ ದೇವತೆಗಳೂ ಅಡಗಿಕೊಂಡಿದೆ. ಹದಿನಾಲ್ಕು ಲೋಕಗಳು, ಋಷಿಗಳು, ದೇವತೆಗಳು, ಬ್ರಹ್ಮನೇ ಮೊದಲಾದವರು ಪಶುವಿನ ಶರೀರದಲ್ಲಿ ಅಡಗಿದ್ದಾರೆಂದು ಶಾಸ್ತ್ರವು ಹೇಳುತ್ತದೆ.

" ಗವಾಮ್ ಅಂಗೇಷು ತಿಷ್ಠತಿ ಭುವನ
ಸರ್ವಾ ಚರಾಚರಂ ಜಗತ್ |
ಯಸ್ಮಾತ್ ತಸ್ಮಾತ್ ಶಿವ ಮೇಸ್ಯಾ
ತ್ ಪರತ್ರಚ ||

ಎಂದು ಗೋವನ್ನು ಸೇವಿಸಿದವರು ಪ್ರದಕ್ಷಿಣೆ ಮಾಡಿ ಹೋಗಿರುತ್ತಾರೆ. ಆದುದರಿಂದಲೇ ಎಲ್ಲಾ ಪ್ರಾಣಿಗಳಿಗಿಂತಲೂ ಗೋವಿಗೆ ಒಂದು ಉನ್ನತ ಸ್ಥಾನ ಸಿಕ್ಕಿದೆ. ಇದರಿಂದ ಗೋದಾನದ ಮಹಿಮೆಯೂ ಹೆಚ್ಚಿದುತ್ತದೆ. ಈ ದಾನವನ್ನು ಮಾಡಿದವರಿಗೆ ಇಹಲೋಕದಲ್ಲಿಯೇ ಅಲ್ಲದೆ ಪರಲೋಕದಲ್ಲಿಯೂ ಸಹ ಸುಖಸೌಭಾಗ್ಯಗಳು ಲಭಿಸುತ್ತವೆಯೆಂಬುದರಲ್ಲಿ ಸಂಶಯವಿಲ್ಲ. ಇದರ ಮಹಿಮೆಯನ್ನು ತೋರಿಸಲು ಒಂದು ಪುಟ್ಟ ಕಥೆಯನ್ನು ಹೇಳುತ್ತೇನೆ. ಹಿಂದೊಂದು ಕಾಲದಲ್ಲಿ ಬ್ರಹ್ಮದೇವರು ಒಂದು ಹೆಣ್ಣನ್ನು ಸೃಷ್ಟಿಸಿದರು. ಆ ಹೆಣ್ಣಿನ ಅಂಗಾಂಗಗಳಲ್ಲಿ ಒಂದು ವಿಧವಾದ ದೋಷವನ್ನೂ ಕಂಡುಬರಲಿಲ್ಲ. ಆದ್ದರಿಂದ 'ಅಹಲ್ಯಾ' ಎಂದು ಆಕೆಗೆ ನಾಮಕರಣ ಮಾಡಿದರು. ಆಕೆಗೆ ಯುಕ್ತ ವಯಸ್ಸು ಬಂದ ಮೇಲೆ ವಿವಾಹಮಾಡಲು ಬ್ರಹ್ಮದೇವರು ನಿಶ್ಚಯಿಸಿದರು. ಆಗ ಇಂದ್ರನೇ ಮೊದಲಾದ ದೇವತೆಗಳು ರೂಪವತಿಯಾದ ಅಹಲ್ಯೆಯನ್ನು ವಿವಾಹಮಾಡಿಕೊಳ್ಳಲು ನಾನುಂದು ತಾನುಂದು ಎಂದು ಬಗತೊಡಗಿದರು.

ಇವನ್ನು ಕೇಳಿದ ಬ್ರಹ್ಮದೇವರು ಸ್ವಲ್ಪ ಕಾಲ ಯೋಚಿಸಿದವರಾಗಿ,

' ಯಾರೇಆಗಲಿ ಈ ಭೂಲೋಕವನ್ನು ಪೂರ್ಣವಾಗಿ ಪ್ರದಕ್ಷಿಣೆಮಾಡಿ ಮೊದಲು ಬರುವರೋ ಅವರಿಗೆ ಅಹಲ್ಯೆಯನ್ನು ವಿವಾಹ ಮಾಡಿಕೊಡುವೆನು, ಇದು ಪರತ್ತು ಎಂದು ಹೇಳಿದರು.

ಇವನ್ನು ಕೇಳಿದ ಇಂದ್ರ, ವರುಣ, ಅಗ್ನಿಯೇ ಮೊದಲಾದ ದೇವತೆಗಳು ಆ ಕನ್ಯೆಯನ್ನು ವಿವಾಹ ಮಾಡಿಕೊಳ್ಳಲು ಆಸೆಪಟ್ಟವರಾಗಿ ತಮ್ಮತಮ್ಮ ವಾಹನಗಳನ್ನೇರಿ ವೇಗವಾಗಿ ಭೂಪ್ರದಕ್ಷಿಣೆ ಮಾಡಲು ತೊಡಗಿದರು. ಇದನ್ನು ಕಂಡ ನಾರದ ಮಹರ್ಷಿಗಳು ದೇವತೆಗಳನ್ನು ಮೋಸಗೊಳಿಸಲು ಒಂದು ಉಪಾಯ ಹುಡುಕಿದರು.

ಕಾಡಿನಲ್ಲಿ ಒಂಟಿಯಾಗಿ ಕುಳಿತು ತಪವನ್ನಾಚರಿಸುತ್ತಿದ್ದ ಗೌತಮ ಮಹರ್ಷಿಗಳ ಬಳಿಗೆ ನಾರದರು ಬಂದು—

" ಉತ್ತಮನಾದ ಹೆಣ್ಣೊಂದು ನಿನ್ನ ಇಷ್ಟದಂತೆ ನಿನಗೆ ವಿವಾಹ ಮಾಡಿಸುತ್ತೇವೆ. ದೇವತೆಗಳೆಲ್ಲರೂ ಆ ಕನ್ಯೆಯನ್ನು ನಮಗೆ ಮಾಡಿಕೊಳ್ಳಲು ಭೂಪ್ರದಕ್ಷಿಣೆ ಮಾಡಲು ಹೊರಟಿದ್ದಾರೆ. ಯಾರು ಮೊದಲು ಬರುವರೋ ಅವರಿಗೆ ಆ ಹೆಣ್ಣನ್ನು ಕೊಟ್ಟು ವಿವಾಹ ಮಾಡಿಕೊಡುವುದಾಗಿ ಬ್ರಹ್ಮದೇವರು ಹೇಳಿದ್ದಾರೆ. ಹೀಗಿರುವಾಗ ನೀವು ಕರುಹಾಕುವ ಈ ಗೋಮಾತೆಯನ್ನು ಪ್ರದಕ್ಷಿಣೆ ಮಾಡಿದರೆ ಹದಿನಾಲ್ಕು ಲೋಕಗಳನ್ನು ಪ್ರದಕ್ಷಿಣೆ ಮಾಡಿದ ಹಾಗೆ ಆಗಿಬಿಡುವುದು" ಎಂದು ಹೇಳಿ, ಅವರ ಕೈಲಿ ಆ ಗೋವನ್ನು ಪ್ರದಕ್ಷಿಣೆ ಮಾಡಿಸಿ, ಬ್ರಹ್ಮದೇವರ ಬಳಿಗೆ ಕರೆದೊ

' ಹದಿನಾಲ್ಕು ಲೋಕಗಳನ್ನೆಲ್ಲಾ ಇವರು ಪ್ರದಕ್ಷಿಣೆ ಮಾಡಿಬಿಟ್ಟರುವರು : ಇವರಿಗೆ ಅಹಲ್ಯೆಯನ್ನು ಕೊಟ್ಟು ವಿವಾಹ ಮಾಡತಕ್ಕದ್ದು " ಎಂದು ಹೇಳಿದರು.

ಇದನ್ನು ಕೇಳಿದ ಬ್ರಹ್ಮದೇವರು—

" ಇವರಿಗೆ ಮುಂಚೆಯೇ ಇಂದ್ರಾದಿಗಳು ಹೋಗಿರುತ್ತಾರೆ; ಅವರುಗಳೇ ಇನ್ನೂ ಬಂದಿಲ್ಲ : ಇವರು ಮಾತ್ರ ಹೇಗೆ ಪ್ರದಕ್ಷಿಣೆ ಮಾಡಿದರು " ಎಂದು ಪ್ರಶ್ನಿಸಿದರು.

" ಪ್ರಸವೋನ್ಮುಖವಾದ ಗೋವನ್ನು ಪ್ರದಕ್ಷಿಣೆ ಮಾಡಿದಂತೆ ಆಗುತ್ತದೆ ಎಂದು ಶಾಸ್ತ್ರಗಳಲ್ಲಿ ನೀವೇ ಹೇಳಿರುವಿರಲ್ಲಾ, ಅದರಂತೆ ಇವರು ಮಾಡಿರುತ್ತಾರೆ. ಅದಕ್ಕಾಗಿಯೇ ಶೀಘ್ರವಾಗಿ ವಿವಾಹವನ್ನು ನಡೆಸಿ' ಎಂದರು.

ಬ್ರಹ್ಮದೇವರು ಏನನ್ನೂ ಹೇಳಲು ಸಾಧ್ಯವಿಲ್ಲದ್ದರಿಂದ ಯಥಾ ಶಾಸ್ತ್ರವಾಗಿ ಗೌತಮರಿಗೆ ಅಹಲ್ಯಾದೇವಿಯನ್ನು ಕೊಟ್ಟು ವಿವಾಹವನ್ನು ನಡೆಸಿದರು.

ಅನಂತರ ಇಂದ್ರನು ಬಂದು ವಿಷಯವನ್ನು ತಿಳಿದು ಬಹಳ ನೊಂದನು. (ಇದಕ್ಕಾಗಿಯೇ ಇವಳನ್ನು ಸೇರಬೇಕೆಂದು ಯೋಚಿಸಿ ಆಶ್ರಮದಲ್ಲಿ ಗೌತಮರ ವೇಷ ಧರಿಸಿ ಅಹಲ್ಯೆಯನ್ನು ವಂಚಿಸಿದುದು).

ಇಷ್ಟು ಮಹಿಮೆಯುಳ್ಳ ಗೋವನ್ನು ' ಭಿಕ್ಷವೇ ಬಹೂ ಪುತ್ರಾಯ ಶ್ರೋತ್ರಿಯಾಯ ಆ ಹಿತಾಗ್ನಯೇ ' ಎನ್ನುವಂತೆ ಪಾತ್ರನನ್ನರಿತು (ಅರ್ಹತೆಯನ್ನರಿತು) ದಾನಮಾಡಿದರೆ ಎಲ್ಲಾ ಸೌಭಾಗ್ಯಗಳನ್ನೂ ಹೊಂದಬಹುದು.

ಈ ಗೋದಾನ ಮಾಡುವ ಸಮಯದಲ್ಲಿ ಬಹಳ ನಿದಾನವಾಗಿಯೂ ಎಚ್ಚರಿಕೆಯಿಂದಲೂ ಇದ್ದು ಮಾಡತಕ್ಕದ್ದು. ದಾನ ಮಾಡಲ್ಪಟ್ಟ ಗೋವು ಹಳೆಯ ವಾಸನೆಯಿಂದ ಹಿಂದೆಇದ್ದ ಜಾಗಕ್ಕೇ ಬಂದು ಸೇರಿಬಿಡಬಹುದು. ನನಗೆ ಹಲವು ಪಶುಗಳ ಗುಂಪಿನಲ್ಲಿ ಅದನ್ನು ಕಂಡುಹಿಡಿಯುವದಕ್ಕಾಗದೇ ಹೋಗಬಹುದು. ಆಗ ಅದನ್ನು ಮತ್ತೊಬ್ಬನಿಗೆ ದಾನಮಾಡಿದರೆ ಆಗ ' ದತ್ತಾಪಹಾರ " ವೆಂಬ ಮಹಾಪಾಪಕ್ಕೆ ಭಾಗಿಯಾಗಬೇಕಾಗುವುದು.

[' ಶ್ರೀ ಲೋಕರಕ್ಷಕರ್ " ತಮಿಳು ಪತ್ರಿಕೆಯಿಂದ ಅನುವಾದಿತ]

ಅನುವಾದಿತ— ಅನಂತಕೃಷ್ಣ ಜೋಯಿಸ್

Save the Cow

Swami Govanand the great saint who started orig nally the campaign has stated— that the late Lal Bahadur Shastri in his capacity as Prime Minister of India, had assured him and other lovers of cows that total ban on cow slaughter would be imposed soon. He has also stated that the Government had deliberately forced his campaign on the sadhus and saints and that let the government slaughter the saints instead of slaughtering the cows and the saints are ready for the same to protect Indian culture which is unique in the world.

He has further stated that as a protest against the cruel massacre by the Government, before the parliament house, at New Delhi, on the 7th November 1966, monument of martyrs crucified on the said date be raised in front of the Parliament house as was made of martyrs at the Jllianwala Baug and all the members of Parliament should salute the monument of the martyrs before entering the Parliament house.

ಗೋವಧಾ ನಿರೋಧ

ನವದೆಹಲಿ— ವಿಶ್ವ ಆಸ್ತಿಕರ ಸಮ್ಮೇಳನದ ವ್ಯವಸ್ಥಾಪಕರಾದ ಸ್ವಾಮಿ ಶ್ರೀ ಬನಂದ ಹರಿ ಮಹಾರಾಜ್‌ರವರು ರಾಷ್ಟ್ರಾಧ್ಯಕ್ಷ ಶ್ರೀ ಗಿರಿಯವರನ್ನು ಅವರ ನಿವಾ ನಲ್ಲಿ ಕಂಡು, ತಮ್ಮ " ಗೋರಕ್ಷ ' ಪುಸ್ತಕವನ್ನು ಇತ್ತರು ; ಗೋವು ಮತ್ತು ತವರನ್ನು ರಕ್ಷಿಸುವುದು ಅವಶ್ಯವೆಂದು ಹೇಳಿದರು. ಅಧ್ಯಕ್ಷರು ಕೈ ಮುಗಿದು ಪುಸ್ತಕವನ್ನು ಸ್ವೀಕರಿಸುತ್ತಾ, ಗೋಹತ್ಯೆ ನಿಲ್ಲಲು ತಾವು ಪ್ರಯತ್ನಿಸುವದಾಗಿ ಭರವಸೆ ಇತ್ತರೆಂದು, " ಸನ್ಮಾರ್ಗ " ದಿಂದ ತಿಳಿಯಬರುತ್ತದೆ.

ಪೂ ಜ ನ

(ಕೆ. ವೆಂಕಟರಾಯಾಚಾರ್ಯ, ಸುರತ್ಕಲ್ಲು)

ಅಮಾತನಾದರೂ ಕರೆಯಿಸಲ್ಪಟ್ಟು ಮನೆಗೆ ಬರುವಂತಿದ್ದರೆ ಆತನಿಗೆ ' ಅಭ್ಯಾಗತ " ನೆಂದೂ, ಅವುನೆ: ತಿಥಿ (ದಿನ) ನಿಯನುನಿಲ್ಲದೆ, ಸಹಾರಾರ್ಥಿಯಾಗಿದ್ದು ಆಕಸ್ಮಿಕವಾಗಿ ಬರುನವನಿಗೆ ' ಅತಿಥಿ " ಯೆಂದೂ ಹೆಸರಿಸುವುದು ಪ್ರಾಚೀನ ಕೃತಿಗಳಿಂದ ತಿಳಿಯುತ್ತದೆ.

ಇತ್ತೀಚೆಗೆ ಶಾಲಾ ವಿದ್ಯಾರ್ಥಿಗಳಿಗಾಗಿ ಮತ್ತು ಸಾರ್ವಜನಿಕರಿಗಾಗಿ ಬರೆದ್ದ ಪ್ರಕಟಿಸಿರುವ ಶಬ್ದ–ಅರ್ಥಕೋಶ (ನಿಘಂಟು) ಗಳಲ್ಲಿ ಈ ಬಗೆತ ವಿಪರೀತವಾಗಿ, ಬದಲಾಗಿ ಬರೆದಿರುವುದುಂಟು ! ಅಂದರೆ, ಇಂತಹ ವಿಪರೀತಗಳಿಂದ ನಮ್ಮ ಯುವ ಜನಾಂಗದಲ್ಲಿ ವಿಪರಿಣಾಮ ಉಂಟಾಗುತ್ತದೆ.

ಈ ಅಭ್ಯಾಗತರ ಸತ್ಕಾರ, ಅತಿಥಿ ಪೂಜನೆಗಳು ಪ್ರಾಚೀನ ಕೃತಿಗಳಲ್ಲಿ ಉಲ್ಲಿಖಿತವಾಗಿವೆ. ' ಮೋಘಮನ್ನಂವಿಂದತೇ ಅಪ್ರಚೇತಾಃ ' ಎಂದು ವೇದದಲ್ಲಿದೆ ಪ್ರಚೇತಸನಲ್ಲದವನು – ಇಂತಹ ಸತ್ಕಾರಾದಿಗಳನ್ನು ಮಾಡುವ ಬುದ್ಧಿಯಿಲ್ಲದವನು– ವ್ಯರ್ಥವಾಗಿ ಅನ್ನವನ್ನು ಪಡೆವನೆಂದು ಹೇಳಿದೆ. ಈ ಭಾವವು ಪೌರಾಣೀಕವಾಗಿ ಹೇಳಿದೆ. ' ಮೋಘಂ ಧ್ರುವಂ ಪೋರ್ಣಯತಿ । ಮೋಘಮಶ್ನಾತುಪಚ್ಯತೇ । ಮೋಘಮನ್ನಂ ಸದಾಶ್ನಾತಿ । ಯೋಽತಿಥಿಂ ನ ಚ ಪೂಜಯೇತ್ ॥ ' (ಆಶ್ವಮೇಧ ಪರ್ವದ ಉಪಪರ್ವ ' ವೈಷ್ಣವಧರ್ಮಪರ್ವ 6–69)

ಇಂತಹ ಸದ್ಭಾವನೆ ಇಂದಿನವರಲ್ಲಿ ಉಳಿಯುವಂತೆ ನಾವು ಎಚ್ಚರವಾಗಿರಬೇಕು. ವಿದ್ಯಾಭ್ಯಾಸದಲ್ಲಿ, ನಿತ್ಯಜೀವನದಲ್ಲಿ ಸಾರ್ಥಕತೆಯನ್ನು ಪಡೆಯುವಂತಾಗಬೇಕು !

ಗಾಂಧೀಜೀ ಅಮೃತವಾಣಿ

ಮನುಷ್ಯಕೋಟಿ ಬಳಿ ಇರುವ ಎಲ್ಲಕ್ಕೂ ಪ್ರಬಲ ಅಸ್ತ್ರ ಅಹಿಂಸೆ.

ಗೋರಕ್ಷಣಕ್ಕೆ ಚಂದಾ ಮತ್ತು ಡೊನೇಷನ್ ಪಾವತಿಮಾಡುವ-ಅಡ್ರೆಸ್

1 ಗೋರಕ್ಷಣ ಆಫೀಸ್, ಸತ್ಯವಾದಿ ಪ್ರೆಸ್ ಚಾಮರಾಜಪುರಂ, ಮೈಸೂರು.
2 ಶ್ರೀ ಬಿ ಜಿ ಶಾಸ್ತ್ರಿ, ಆಥರ್ ಮತ್ತು ಅಸ್ಸಾಲಜರ್, 180 ನ್ಯೂ ಬ್ಲಾಕ್, ವಿದ್ಯಾರಣ್ಯಪುರಂ, ಮೈಸೂರು.
3 ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರ ಸಭಾ ಹೊಂಗನೂರು, ಚಾಮರಾಜನಗರ ತಾಲ್ಲು
4. ಡಾ ॥ ಪಿ ಎಸ್ ನಾರಾಯಣ್, ಮತ್ತು ಪಿ ಎಸ್. ವಿಶ್ವನಾಥ್, ಅಹಿಂಸಾಪ್ರಚಾರಕರು, 320 – 5 ನೇ ಬ್ಲಾಕ್, ಜಯನಗರ, ಬೆಂಗಳೂರು

ದೇಶದ ಹಿತಕಾಗಿ
ಕುಟುಂಬ ಯೋಜನೆ

ವುಡ್‌ಲ್ಯಾಂಡ್ ಜಯಪ್ರದ 4 ನೇ ವಾರ
ಶಿ ನ ಅನೋಘ ಪ್ರಾರಂಭ
— ಮನಮೋಹಕ ಹಿಂದಿ ಚಿತ್ರ — ಈಸ್ಟ್‌ಮನ್ ಕಲರ್ —
ಹಸೀನಾ ಮಾನ್ ಜಾಯೇಗಿ
ಶಶೀಕಪೂರ್ ಬಬೀತಾ ಜಾನೀವಾಕರ್
ಸಂಗೀತ : ಕಲ್ಯಾಣಜಿ ಆನಂದಜಿ
[ದಿನ 3 ಪ್ರದರ್ಶನಗಳು]

ಆಪೆರಾ— ಅನೋಘ 2 ನೇ ವಾರ
.... ಅತ್ಯಮೋಘ ತಮಿಳು ಚಿತ್ರ ....
ತುಣ್ಣೆವನ್
ಪಾತ್ರ— ಎ ವಿ ಎಂ ರಾಜನ್, ಸಾಹುಕಾರ್ ಜಾನಕಿ, ಸುಂದರ್, ನಾಗೇಶ್
ನಿರ್ದೇಶನ : ಎಂ ಎಂ ತಿರುಮಂಗಂ
ದಿನ 3 ಆಟಗಳು

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಾಗಿ ನಡೆಯಲಿ
ಗೋರಕ್ಷಣಕ್ಕೆ ಬೆಂಬಲ ನೀಡಿ

Protect the Cow

Quality Printing — Neat Binding
Lakshminarasimha Press
Sivarampet. Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajanagar, Mysore